ಇಲಾಖೆ / ವಿಷಯ : DEPARTMENT / SUBJECT:
ಪತ್ರಿಕೆಯ ಹೆಸರು : NAME OF THE NEWS PAPER:
ದಿನಾಂಕ : DATE:

# ರಾಜ್ಯದ ಆರ್ಥಿಕ ಪರಿಸ್ಥಿತಿ ಶೋಚನೀಯ

## ಬದ್ಧತಾ ವೆಚ್ಚ ಹೆಚ್ಚಳಕ್ಕೆ ಸಿದ್ದರಾಮಯ್ಯ ಆಕ್ರೋಶ | ಜಿಎಸ್‌ಟಿ ಪರಿಹಾರ 2025ವರೆಗೂ ಮುಂದುವರಿಸಲು ಆಗ್ರಹ

ವಿಧಾನಸಭೆ: ಸಾಲ ಮಾಡಿ ಸಂಬಳ, ಪಿಂಚಣಿ ಪಾವತಿ ಮಾಡುವಂತಾಗಿರುವುದು ರಾಜ್ಯದ ಆರ್ಥಿಕ ಪರಿಸ್ಥಿತಿಯ ದುಸ್ಥಿತಿಗೆ ಸಾಕ್ಷಿ ಎಂದು ಪ್ರತಿಪಕ್ಷ ನಾಯಕ ಸಿದ್ದರಾಮಯ್ಯ ಆರೋಪಿಸಿದ್ದಾರೆ.

ಬಜೆಟ್ ಮೇಲಿನ ಚರ್ಚೆಯಲ್ಲಿ ಪಾಲ್ಗೊಂಡು ಮಾತನಾಡಿದ ಅವರು, 2021-22 ನೇ ಸಾಲಿನಲ್ಲಿ ಬದ್ಧತಾ ವೆಚ್ಚ ಶೇ.102ಕ್ಕೆ ಏರಿದೆ. ಸಾಲದ ಹಣ ಇದಕ್ಕೇ ಹೋದರೆ ಇನ್ನು ಅಭಿವೃದ್ಧಿ ಕಾಮಗಾರಿ






ಗಳಿಗೆ ಹಣ ಎಲ್ಲಿಂದ ಹೊಂದಿಸುತ್ತೀರಿ ಎಂದು ಪ್ರಶ್ನಿಸಿದರು. 2019-20ರಲ್ಲಿ ಶೇ.87ರಷ್ಟಿದ್ದ ಬದ್ಧತಾ ವೆಚ್ಚ 2020-21 ಕ್ಕೆ ಶೇ.92 ಹಾಗೂ 2021-22 ಕ್ಕೆ ಶೇ.102ಕ್ಕೆ ಏರಿದೆ. ಇದು ಹೀಗೇ ಮುಂದುವರಿದರೆ ಪಿಂಚಣಿಗೂ ನಿಮ್ಮ ಬಳಿ ಹಣ ಇರುವುದಿಲ್ಲ ಎಂದು ಎಚ್ಚರಿಕೆ ನೀಡಿದರು.

ರಾಜ್ಯದ ಒಟ್ಟಾರೆ ಆದಾಯದ ಶೇ.25ರಷ್ಟು ಸಾಲಕ್ಕೆ ಅವಕಾಶವಿದೆ. ಕೊರೊನಾ ನೆಪವೊಡ್ಡಿ ಅದನ್ನು ಶೇ.27ಕ್ಕೆ ಏರಿಸಿಕೊಂಡಿದ್ದೀರಿ. ಈಗಾಗಲೇ ಸಾಲ ಪಡೆಯುವ ಪ್ರಮಾಣ ಶೇ.26.9ರಷ್ಟು ತಲುಪಿದೆ. ಇನ್ನೂ ಸಾಲ ಪಡೆಯಲು ಸಾಧ್ಯವೇ ಇಲ್ಲ. ಹೀಗಾದರೆ ಎಲ್ಲಿಂದ ಹಣ ತರುತ್ತೀರಿ ಎಂದರು.

ಖೋತಾ ಬಜೆಟ್ ಮಂಡಿಸಿದ್ದೀರಿ. 2005-06ರ ನಂತರ ಇದೇ ಮೊದಲ ಬಾರಿಗೆ ಈ ಪರಿಸ್ಥಿತಿ ಉಂಟಾಗಿದೆ. ಬಿಜೆಪಿ ಅಧಿಕಾರಕ್ಕೆ ಬಂದ ನಂತರ ಎರಡು ವರ್ಷಗಳಲ್ಲಿ ಆರ್ಥಿಕ ಪರಿಸ್ಥಿತಿ ಶೋಚನೀಯವಾಗಿದೆ ಎಂದರು.

ಕೇಂದ್ರದಿಂದ ಬರುವ ಅನುದಾನವೂ ಕಡಿತವಾಗಿದೆ. ಹಣಕಾಸು ಆಯೋಗದ ಶಿಫಾರಸು ಪ್ರಕಾರವೂ ಬರುತ್ತಿಲ್ಲ. 25 ಸಂಸದರನ್ನು ಕರೆದುಕೊಂಡು ಹೋಗಿ ಪ್ರಧಾನಿ ಬಳಿ ಕೇಳುವ ಧೈರ್ಯವೂ ನಿಮಗಿಲ್ಲ ಎಂದು ಟೀಕಿಸಿದರು.

2022 ಜೂನ್‌ಗೆ ಜಿಎಸ್‌ಟಿ ಪರಿಹಾರ ನಿಂತು ಹೋಗಲಿದೆ. ಆಗ ರಾಜ್ಯ ಸರ್ಕಾರ ಮತ್ತಷ್ಟು ಸಂಕಷ್ಟಕ್ಕೆ ಸಿಲುಕಲಿದೆ. ನಾನು ನಿಮಗೆ ಸಲಹೆ ನೀಡುತ್ತೇನೆ. ಜಿಎಸ್‌ಟಿ ಪರಿಹಾರ 2025ರವರೆಗೂ ಮುಂದುವರಿಸುವಂತೆ ಕೇಂದ್ರದ ಮೇಲೆ ಒತ್ತಡ ತನ್ನಿ. ಸಂಘರ್ಷಕ್ಕೆ ಇಳಿಯಬೇಡಿ ಆದರೆ, ನಮ್ಮ ಹಕ್ಕು ಪಡೆಯಲು ಬಿಡಬೇಡಿ. ರಾಜ್ಯದ ಜನತೆ ಹಿತಾಸಕ್ತಿ ನಮಗೆ ಮುಖ್ಯ ಎಂದು ಹೇಳಿದರು.

ಮುಖ್ಯ ಕಾರ್ಯದರ್ಶಿಯವರ ನೇತೃತ್ವದ ಸಮಿತಿಯು ಅನಗತ್ಯ ಹುದ್ದೆ ಕಡಿತ, ಇಲಾಖೆಗಳ ವಿಲೀನ, ಅನಗತ್ಯ ವೆಚ್ಚ ಕಡಿತಕ್ಕೆ ಶಿಫಾರಸು ಮಾಡಿತ್ತು. ಆ ಬಗ್ಗೆ ಏನು ಕ್ರಮ ಕೈಗೊಂಡಿದ್ದೀರಿ ಎಂದು ಪ್ರಶ್ನಿಸಿದರು. ತೆರಿಗೆ ಹೊರೆ ಇಲ್ಲದ ಬಜೆಟ್ ಎಂದು ಶಹಬ್ಬಾಸ್‌ಗಿರಿ ಪಡೆದಿದ್ದೀರಿ? ತೆರಿಗೆ ಹಾಕಲು ನಿಮಗೆ ಅವಕಾಶವಾದರೂ ಎಲ್ಲಿದೆ. ಜಿಎಸ್‌ಟಿ ಬಂದ ಮೇಲೆ ಪೆಟ್ರೋಲ್, ಡೀಸೆಲ್, ಅಬಕಾರಿ ಹೊರತುಪಡಿಸಿ ನೀವು ಏನೂ ಮಾಡುವಂತಿಲ್ಲ. ಅಬಕಾರಿ ತೆರಿಗೆ ಈಗಾಗಲೇ ಆಕಾಶ ಮುಟ್ಟಿದೆ. ಪೆಟ್ರೋಲ್ ಮತ್ತು ಡೀಸೆಲ್ ಮೇಲೆ ಈಗ ಹಾಕಿರುವ ಕೇಂದ್ರ ಹಾಗೂ ರಾಜ್ಯದ ತೆರಿಗೆಗೆ ಜನ ಕಷ್ಟಕ್ಕೊಳಗಾಗಿದ್ದಾರೆ. ಇನ್ನು ಎಲ್ಲಿಂದ ತೆರಿಗೆ ಹಾಕಲು ಸಾಧ್ಯ ಎಂದರು.

ಕೇಂದ್ರ ಹಾಗೂ ರಾಜ್ಯದಲ್ಲಿ ಬಿಜೆಪಿ ಸರ್ಕಾರ, ಡಬಲ್ ಎಂಜಿನ್ ಸರ್ಕಾರ ಇದ್ದರೆ ಸ್ವರ್ಗವೇ ಇಳಿದು ಬರಲಿದೆ ಎಂದು ಹೇಳಿದಿರಿ. ನರಕ ಸೃಷ್ಟಿಸಿದ್ದೀರಿ ಎಂದು ಲೇವಡಿ ಮಾಡಿದರು.

ಈ ಸಂದರ್ಭದಲ್ಲಿ ಮಧ್ಯಪ್ರವೇಶಿಸಿ ಮುಖ್ಯಮಂತ್ರಿ ಯಡಿಯೂರಪ್ಪ ಅವರು, ರಾಜ್ಯದ ಅಭಿವೃದ್ಧಿ ಯೋಜನೆಗಳಿಗೆ ಯಾವುದೇ ಕೊರತೆ ಆಗದು. ಆ ಬಗ್ಗೆ ನಾನು ಭರವಸೆ ನೀಡುತ್ತೇನೆ. ಬಜೆಟ್‌ನಲ್ಲಿ ಘೋಷಿಸಿದ ಯೋಜನೆಗಳಿಗೆ ಹಣ ಮೀಸಲಿಡಲಾಗಿದೆ ಎಂದು ಹೇಳಿದರು.

ವಿ ಕಮ್ ಬ್ಯಾಕ್: ರಾಜ್ಯದಲ್ಲಿ ನಾವು ಅಧಿಕಾರಕ್ಕೆ ಬಂದೇ ಬರುತ್ತೇವೆ. ನಿಮ್ಮ ದುರಾಡಳಿತಕ್ಕೆ ಅಂತ್ಯ ಕಾಣಲಿದೆ. ಜನತೆ ನಮಗೆ ಅಧಿಕಾರ ಕೊಡಲಿದ್ದಾರೆ. ಅದು ದೂರವೇನಿಲ್ಲ ಎಂದು ಸಿದ್ದರಾಮಯ್ಯ ಹೇಳಿದಾಗ, ಬಸವರಾಜ ಬೊಮ್ಮಾಯಿ, ನಿಮ್ಮ ಆಡಳಿತ ನೋಡಿಯೇ ಜನ ಅಲ್ಲಿ ಕುಳಿಸಿದ್ದಾರೆ ಎಂದರು. ಆಗ ಸಿದ್ದರಾಮಯ್ಯ ಅವರು, ಜನ ನಮ್ಮನ್ನೂ ನೋಡಿದ್ದಾರೆ, ನಿಮ್ಮನ್ನೂ ನೋಡುತ್ತಿದ್ದಾರೆ ಎಂದು ಹೇಳಿದರು.

### ಮುಂದಿನ ಬಾರಿಯೂ ಬಾದಾಮಿಯಿಂದ ಸ್ಪರ್ಧೆ

ವಿಧಾನಸಭೆ: ನಾನು ಮುಂದಿನ ಬಾರಿ ವಿಧಾನಸಭೆ ಚುನಾವಣೆಗೆ ಸ್ಪರ್ಧಿಸುತ್ತೇನೆ, ಬಾದಾಮಿ ಕ್ಷೇತ್ರದಿಂದಲೇ ಕಣಕ್ಕಿಳಿಯುತ್ತೇನೆ ಎಂದ ಪ್ರತಿಪಕ್ಷ ನಾಯಕ ಸಿದ್ದರಾಮಯ್ಯ ಅವರು ಒಂದು ಹಂತದಲ್ಲಿ ಸರ್ಕಾರಕ್ಕೆ ವಿಶ್ವಾಸವಿದ್ದರೆ ವಿಧಾನಸಭೆಯನ್ನೇ ವಿಸರ್ಜಿಸಿ ಚುನಾವಣೆಗೆ ಹೋಗೋಣ ಬನ್ನಿ ಎಂದು ಸವಾಲು ಹಾಕಿದ ಪ್ರಸಂಗ ನಡೆಯಿತು.

ಇದಕ್ಕೆ ಬಿ.ಎಸ್.ಯಡಿಯೂರಪ್ಪ ಮತ್ತೆ ಅಧಿಕಾರಕ್ಕೆ ಬರುವುದಾಗಿ ತಿರುಕನ ಕನಸು ಕಾಣುತ್ತಿದ್ದೀರಿ. ನಾನು ಮಂಡಿಸಿದ ಬಜೆಟ್‌ಅನ್ನು ಜನ ಮೆಚ್ಚಿದ್ದಾರೆ. ಅದನ್ನಿಟ್ಟುಕೊಂಡೇ ಮುಂಬರುವ ಮೂರು ವಿಧಾನಸಭೆ, ಒಂದು ಲೋಕಸಭಾ ಚುನಾವಣೆಯಲ್ಲಿ ಗೆದ್ದು ನಂತರ ಚರ್ಚಿಸುತ್ತೇನೆಂದು ಪ್ರತಿ ಸವಾಲೊಡ್ಡುವ ರೀತಿಯಲ್ಲಿ ತಿರುಗೇಟು ನೀಡಿದ್ದು ಗಮನ ಸೆಳೆಯಿತು.

ಸೋಮವಾರ ಮಧ್ಯಾಹ್ನ ಬಜೆಟ್ ಮೇಲಿನ ಚರ್ಚೆಯಲ್ಲಿ ಮಾತನಾಡಿದ ಸಿದ್ದರಾಮಯ್ಯ, ಇಂತಹ ಬಜೆಟ್ ನೀಡಲು 'ಆಪರೇಷನ್ ಕಮಲ' ನಡೆಸಿ ಅಧಿಕಾರಕ್ಕೆ ಬಂದಿರಾ ಎಂದು ಪ್ರಶ್ನಿಸಿದರು. ಆಗ ಯಡಿಯೂರಪ್ಪ ನೀವೇ ಕಳುಹಿಸಿಕೊಟ್ಟವರು ಎಂದು ನಕ್ಕರು. ಅದಕ್ಕೆ ಸಿದ್ದರಾಮಯ್ಯ, ನಾನು ನಿಮ್ಮ ಬಳಿ ಬಂದು ಆ ರೀತಿ ಮಾತನಾಡಿದ್ದೆನಾ ಎಂದು ಕೇಳಿದರು. ಅದಕ್ಕೆ ಯಡಿಯೂರಪ್ಪ 'ಅದೆಲ್ಲಾ ಬಹಿರಂಗ ಚರ್ಚೆ ಯಾಕೆ ಬಿಡಿ' ಎಂದು ಮತ್ತೆ ನಕ್ಕರು. ಇದಕ್ಕೆ ಸಿದ್ದರಾಮಯ್ಯ, ಬಹಿರಂಗವಾಗಿ ಮಾತನಾಡಿ. ನಾನು ಎದುರಿಸಲು ಸಿದ್ಧನಿದ್ದೇನೆ ಎಂದರು.

### ಸೂಕ್ತ ಕ್ರಮ ಕೈಗೊಳ್ಳಿ

ಕೊರೊನಾ ಪ್ರಕರಣಗಳು ಹೆಚ್ಚಾಗುತ್ತಿರುವ ಬಗ್ಗೆ ಆತಂಕ ವ್ಯಕ್ತಪಡಿಸಿದ ಸಿದ್ದರಾಮಯ್ಯ, ಮತ್ತೆ ಲಾಕ್‌ಡೌನ್ ಮಾಡಬೇಡಿ. ಪರಿಸ್ಥಿತಿ ನಿಭಾಯಿಸಲು ಸೂಕ್ತ ಕ್ರಮ ಕೈಗೊಳ್ಳಿ ಎಂದು ಎಚ್ಚರಿಕೆ ನೀಡಿದರು.

### ನೀವಿದ್ದರೆ ಏನು ಮಾಡುತ್ತಿದ್ರಿ?

ಸಿದ್ದರಾಮಯ್ಯ ಅವರು ರಾಜ್ಯದ ಆರ್ಥಿಕ ಪರಿಸ್ಥಿತಿಯ ಬಗ್ಗೆ ಅಂಕಿ-ಸಂಖ್ಯೆಗಳ ಮೂಲಕ ವಿವರಿಸುತ್ತಿದ್ದಾಗ ಮುಖ್ಯಮಂತ್ರಿ ಯಡಿಯೂರಪ್ಪ ನೀವು ಇದ್ದಿದ್ದರೆ ಏನು ಮಾಡುತ್ತಿದ್ದೀರಿ ಎಂದರು. ಆಗ ಸಿದ್ದರಾಮಯ್ಯ, ನಿಮ್ಮ ಕುರ್ಚಿಯಲ್ಲಿ ನನ್ನನ್ನು ಕೂರಲು ಬಿಡಿ, ಆಗ ನಾನು ಏನು ಮಾಡುವೆ ಎಂಬುದು ತೋರಿಸುತ್ತೇನೆ ಎಂದಾಗ ಸದನದಲ್ಲಿ ನಗೆಯ ಅಲೆ.

### ಅವೈಜ್ಞಾನಿಕ ಟೋಲ್: ರದ್ದತಿಗೆ ಒತ್ತಾಯ

ವಿಧಾನಸಭೆ: ರಾಜ್ಯದಲ್ಲಿರುವ ಅವೈಜ್ಞಾನಿಕ ಟೋಲ್ ಪ್ಲಾಜಾ ರದ್ದುಪಡಿಸಿ ನಿಯಮಾನುಸಾರ 60 ಕಿ.ಮೀ. ಒಂದರಂತೆ ಇರುವಂತೆ ನೋಡಿಕೊಳ್ಳಿ ಎಂದು ಪ್ರತಿಪಕ್ಷ ನಾಯಕ ಸಿದ್ದರಾಮಯ್ಯ ಒತ್ತಾಯಿಸಿದ್ದಾರೆ.

ಪ್ರಶ್ನೋತ್ತರ ವೇಳೆಯಲ್ಲಿ ಕಾಂಗ್ರೆಸ್‌ನ ಡಾ.ಜಿ.ಪರಮೇಶ್ವರ್ ಅವರು ವಿಷಯ ಪ್ರಸ್ತಾಪಿಸಿ, ಕೊರಟಗೆರೆ ವಿಧಾನಸಭೆ ಕ್ಷೇತ್ರದ ವ್ಯಾಪ್ತಿಯಲ್ಲಿ ಹಾದು ಹೋಗಿರುವ ರಾಷ್ಟ್ರೀಯ ಹೆದ್ದಾರಿ-3 ಮತ್ತು 33ರಲ್ಲಿ 21 ಕಿ.ಮೀ.ವ್ಯಾಪ್ತಿಯಲ್ಲಿ ಎರಡು ಟೋಲ್ ಪ್ಲಾಜಾ ಇದೆ. ವಾಹನ ಮಾಲೀಕರಿಂದ ಹಣ ವಸೂಲಿ ಮಾಡಲಾಗುತ್ತಿದೆ. ರೋಡ್ ಟ್ಯಾಕ್ಸ್ ಪಡೆಯುವ ನೀವು ಮತ್ತೆ ಟೋಲ್ ಪಡೆದರೆ ಸುಲಿಗೆ ಅಲ್ಲವೇ ಎಂದು ಪ್ರಶ್ನಿಸಿದರು.

ಇದಕ್ಕೆ ಕಾಂಗ್ರೆಸ್‌ನ ರಾಘವೇಂದ್ರ ಹಿಟ್ನಾಳ್, ಯು.ಟಿ.ಖಾದರ್, ಜೆಡಿಎಸ್‌ನ ವೆಂಕಟರಾವ್ ನಾಡಗೌಡ, ಡಾ.ಅನ್ನದಾನಿ ಧ್ವನಿಗೂಡಿಸಿ ತಮ್ಮ ಭಾಗದಲ್ಲೂ ಇದೇ ರೀತಿಯಿದೆ ಎಂದು ಉದಾಹರಣೆ ಸಹಿತ ತಿಳಿಸಿದರು. ಎಂಟು ಕಿ.ಮೀ. ವ್ಯಾಪ್ತಿಯಲ್ಲಿ ಎರಡು ಟೋಲ್ ಇರುವುದನ್ನೂ ತಿಳಿಸಿದರು.

ಆಗ ಮಧ್ಯಪ್ರವೇಶಿಸಿದ ಸಿದ್ದರಾಮಯ್ಯ, ಇದೊಂದು ಅವೈಜ್ಞಾನಿಕ. ಬಳಕೆದಾರರ ಶುಲ್ಕ ಪಡೆಯುವುದು ಸರಿ. ಆದರೆ, ಈ ರೀತಿ ನಿಯಮ ಬಿಟ್ಟು ಟೋಲ್ ಪ್ಲಾಜಾ ನಿರ್ಮಾಣ ಸರಿಯಲ್ಲ, ತಕ್ಷಣವೇ ಆ ಬಗ್ಗೆ ಸಮೀಕ್ಷೆ ನಡೆಸಿ ಅವೈಜ್ಞಾನಿಕ ಟೋಲ್ ಪ್ಲಾಜಾ ನಿಲ್ಲಿಸಿ ಎಂದು ಹೇಳಿದರು.

ಲೋಕೋಪಯೋಗಿ ಸಚಿವರೂ ಆದ ಉಪ ಮುಖ್ಯಮಂತ್ರಿ ಗೋವಿಂದ ಕಾರಜೋಳ ಅವರು, ಈ ವಿಷಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ವ್ಯಾಪ್ತಿಗೆ ಬರುತ್ತದೆ. ಅವರ ಜತೆ ಮಾತನಾಡಲಾಗುವುದು ಎಂದು ತಿಳಿಸಿದರು. ಅಭಿವೃದ್ಧಿ ಕಾಮಗಾರಿಗಳು ನಡೆಯಬೇಕು ಎಂದರೆ ಗುಣಮಟ್ಟದ ರಸ್ತೆಗಳು ನಿರ್ಮಾಣವಾಗಬೇಕು ಎಂದರೆ ಟೋಲ್ ಶುಲ್ಕ ಪಡೆಯಬೇಕಾಗುತ್ತದೆ ಎಂದು ಸಮರ್ಥನೆ ನೀಡಿದರು.